Phone: 08282-257424
E-Mail: kuhrmsection@gmail.com

Fax: 08282-256262
Website: www.kuvempu.ac.in

**ಕುವೆಂಪು ವಿಶ್ವವಿದ್ಯಾಲಯ**

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ ಶಂಕರಘಟ್ಟ – 577 451

**ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ**

ಸಂಖ್ಯೆ: ಕುವಿ: ಮಾಸನಿ–2/ /2017–18 ದಿನಾಂಕ:05–02–2018

**ಸ್ಥಳೀಯ ವೃಂದದಲ್ಲಿ ಬೋಧಕೇತರ ಹುದ್ದೆಗಳನ್ನು ತುಂಬಲು ಅರ್ಜಿಗಳನ್ನು ಆಹ್ವಾನಿಸಿ ಹೊರಡಿಸಲಾದ ಅಧಿಸೂಚನೆ**

ಉಲ್ಲೇಖ:
1. ಸರ್ಕಾಗದ ಅಧಿಸೂಚನೆ ಸಂ: ಡಿ.ಪಿ.ಎ.ಆರ್.06 ಪಿ.ಎಲ್.ಎಕ್ಸ್ 2012, ದಿನಾಂಕ: 06–11–2013.
2. ವಿ.ವಿ. ಅಧಿಸೂಚನೆ ಸಂ:ಕುವಿಮಾಸನಿ–01,02 ಮತ್ತು 03.: 2567:2016–17, ದಿನಾಂಕ: 19–08–2016.
3. ವಿ.ವಿ. ಅಧಿಸೂಚನೆ ಸಂ: ಕುವಿಮಾಸನಿ–01,02 ಮತ್ತು 03.: 6465:2016–17, ದಿನಾಂಕ: 08–03–2017.
4. ವಿ.ವಿ. ಮರು ಅಧಿಸೂಚನೆ ಸಂ:ಕುವಿಮಾಸನಿ–01,02 ಮತ್ತು 03: 2016–17, ದಿನಾಂಕ: 28–04–2017.
5. ಸರ್ಕಾರದ ಸುತ್ತೋಲೆ ಸಂ: ಇಡಿ 136 ಯುಎನ್ಇ 2017, ಬೆಂಗಳೂರು, ದಿನಾಂಕ: 17–07–2017.
6. ಸರ್ಕಾರದ ಸುತ್ತೋಲೆ ಸಂ: ಇಡಿ 572 ಯುಎನ್ಇ 2017, ಬೆಂಗಳೂರು, ದಿನಾಂಕ: 27–09–2017.
7. ಮಾನ್ಯ ಕುಲಪತಿಗಳ ಅನುಮೋದನೆಯ ದಿನಾಂಕ:02–02–2018

*****

ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲು) ಅಧಿಸೂಚನೆ 2013 ರ ಕಂಡಿಕೆ (6) ರನ್ವಯ ಸ್ಥಳೀಯ ವ್ಯಕ್ತಿ ಅರ್ಹತೆ ಪಡೆದ ಅರ್ಹ ಅಭ್ಯರ್ಥಿಗಳಿಂದ ಸ್ಥಳೀಯ ವೃಂದದ. ಈ ಕೆಳಕಂಡ ಹುದ್ದೆಗಳಿಗೆ 08 ಪ್ರತಿಗಳಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ವಿಶ್ವವಿದ್ಯಾಲಯದ ಅಂತರ್ಜಾಲ www.kuvempu.ac.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಎಲ್ಲಾ ರೀತಿಯಲ್ಲೂ ಭರ್ತಿಮಾಡಿದ ಅರ್ಜಿಗಳನ್ನು ದಿನಾಂಕ:21–02–2018ರ ಒಳಗಾಗಿ ಕುಲಸಚಿವರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ – 577451, ಈ ವಿಳಾಸಕ್ಕೆ ಸಲ್ಲಿಸತಕ್ಕದ್ದು.

ಈ ನೇಮಕಾತಿ ಪ್ರಕಟಣೆಯನ್ನು ಉಲ್ಲೇಖ (6)ರ ಸರ್ಕಾರದ ಅನುಮತಿಯ ಮೇರೆಗೆ ಹೊರಡಿಸಲಾಗಿದೆ.

**ಬೋಧಕೇತರ ಹುದ್ದೆಗಳ ವಿವರಗಳು:**

| ಕ್ರ. ಸಂ. | ಹುದ್ದೆ | ಹುದ್ದೆಗಳ ಸಂಖ್ಯೆ ಮತ್ತು ಮೀಸಲಾತಿ |
|---|---|---|
| 1 | ಪ್ರಥಮ ದರ್ಜೆ ಸಹಾಯಕರು | **3 ಹುದ್ದೆಗಳು**<br>01 ಎಸ್.ಸಿ.<br>01 ಜಿ.ಎಂ.<br>01 ಎಸ್.ಟಿ. |

| | | |
|---|---|---|
| 2 | ಅಟೆಂಡರ್ | 3 ಹುದ್ದೆಗಳು<br>01 ಎಸ್.ಸಿ.<br>01 ಜಿ.ಎಂ.<br>01 ಎಸ್.ಟಿ. |
| 3 | ಅಡುಗೆ ಸಹಾಯಕರು | 01 ಜಿ.ಎಂ. |
| 4 | ಜವಾನ ಮತ್ತು ಕಾವಲುಗಾರ | 3 ಹುದ್ದೆಗಳು<br>01 ಎಸ್.ಸಿ.<br>01 ಜಿ.ಎಂ.<br>01 ಎಸ್.ಟಿ. |

**ಅರ್ಜಿ ಶುಲ್ಕದ ವಿವರಗಳು:**

| ಹುದ್ದೆ | ಅರ್ಜಿ ಶುಲ್ಕ | | |
|---|---|---|---|
| | ಇತರೆ ವರ್ಗ | ಎಸ್.ಸಿ./ಎಸ್.ಟಿ./ ಪ್ರವರ್ಗ 1 | ದೈಹಿಕ ಅಂಗವಿಕಲ / ಅಂಧ ಅಭ್ಯರ್ಥಿಗಳು |
| ಪ್ರಥಮ ದರ್ಜೆ ಸಹಾಯಕರು<br>ಅಟೆಂಡರ್<br>ಅಡುಗೆ ಸಹಾಯಕರು<br>ಜವಾನ ಮತ್ತು ಕಾವಲುಗಾರ | 750 | 375 | ಪೂರ್ಣ ವಿನಾಯಿತಿ |

ಅರ್ಜಿ ಶುಲ್ಕದ ಮೊತ್ತವನ್ನು ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ – 577451, ಇವರ ಹೆಸರಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಶಂಕರಘಟ್ಟ, ಇಲ್ಲಿ ಸಂದಾಯವಾಗುವಂತೆ ಡಿ.ಡಿ. ಪಡೆದು ಸಲ್ಲಿಸತಕ್ಕದ್ದು.

**ಬೋಧಕೇತರ ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆ**

| ಕ್ರ. ಸಂ. | ಹುದ್ದೆ ಮತ್ತು ವೇತನ ಶ್ರೇಣಿ | ವಿದ್ಯಾರ್ಹತೆ |
|---|---|---|
| 1 | ಪ್ರಥಮ ದರ್ಜೆ ಸಹಾಯಕರು (16000–29600) | ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಪದವಿ ಮತ್ತು ಕಂಪ್ಯೂಟರ್ ಪ್ರಾಥಮಿಕ ಜ್ಞಾನ |
| 2 | ಅಟೆಂಡರ್ (10400–16400) | 10ನೇ ತರಗತಿಯಲ್ಲಿ ಉತ್ತೀರ್ಣ |
| 3 | ಅಡುಗೆ ಸಹಾಯಕರು (10400–16400) | 04 ನೇ ತರಗತಿಯಲ್ಲಿ ಉತ್ತೀರ್ಣ<br>ಮತ್ತು ಅಡುಗೆ ಮಾಡುವ ಜ್ಞಾನ ಕಡ್ಡಾಯ<br>ಕನಿಷ್ಠ ಮೂರು ವರ್ಷಗಳ ಅನುಭವ ಪ್ರಮಾಣ ಪತ್ರ ಲಗತ್ತಿಸುವುದು |
| 4 | ಜವಾನ ಮತ್ತು ಕಾವಲುಗಾರ (Peon cum watchman) (9600–14550) | 04 ನೇ ತರಗತಿಯಲ್ಲಿ ಉತ್ತೀರ್ಣ |

**ಸೂಚನೆಗಳು:**

1. 'ಸಿ' ಮತ್ತು 'ಡಿ' ಗುಂಪಿನ ಹುದ್ದೆಗಳಿಗೆ ಲಿಖಿತ ಪರೀಕ್ಷೆ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.
2. ಅಡುಗೆ ಸಹಾಯಕರ ಆಯ್ಕೆಯನ್ನು ಅಡುಗೆಗೆ ಸಂಬಂಧಪಟ್ಟ ಪ್ರಾತಕ್ಷಿಕ ಪರೀಕ್ಷೆಯ ಮೂಲಕ ಆಯ್ಕೆ ಮಾಡಲಾಗುವುದು.

3. ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಕಡೆಯ ದಿನಾಂಕಕ್ಕೆ ಮೊದಲೇ ನಿಗದಿತ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು.
4. ಪೋಸ್ಟಲ್ ಆರ್ಡರ್, ಮನಿ ಆರ್ಡರ್, ಚೆಕ್ ಮತ್ತು ಇತರೆ ಬ್ಯಾಂಕ್‌ಗಳ ಡಿ.ಡಿ. ಗಳನ್ನು ಸ್ವೀಕರಿಸಲಾಗುವುದಿಲ್ಲ.
5. ಭರ್ತಿ ಮಾಡಿದ ಅರ್ಜಿಗಳನ್ನು **ದಿನಾಂಕ:21-02-2018ರ** ಒಳಗಾಗಿ ಕುಲಸಚಿವರು, ಕುವೆಂಪು ವಿಶ್ವವಿದ್ಯಾನಿಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577451 ಈ ವಿಳಾಸಕ್ಕೆ ಸಲ್ಲಿಸತಕ್ಕದ್ದು.
6. ಜಾತಿ / ಆದಾಯ / ಇತರೆ ಪ್ರಮಾಣಪತ್ರಗಳ ಪ್ರತಿಗಳನ್ನು ದೃಢೀಕರಿಸಿ 08 ಪ್ರತಿಗಳಲ್ಲಿ ಸಲ್ಲಿಸತಕ್ಕದ್ದು. ಅವುಗಳನ್ನು ಹಿಂದಿರುಗಿಸಲಾಗುವುದಿಲ್ಲ.
7. ವಿವಿಧ ಪ್ರವರ್ಗಗಳಡಿ ಮೀಸಲಾತಿ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಪೂರಕ ದೃಢೀಕೃತ ಪ್ರಮಾಣಪತ್ರಗಳನ್ನು ಲಗತ್ತಿಸತಕ್ಕದ್ದು.
8. ಈಗಾಗಲೇ ಸೇವೆಯಲ್ಲಿರುವ ಅಭ್ಯರ್ಥಿಗಳು ತಮ್ಮ ವಿಭಾಗದ ಮುಖ್ಯಸ್ಥರ ಮೂಲಕ ಷರತ್ತುರಹಿತ ಅನುಮತಿಯೊಂದಿಗೆ ನಿಗದಿತ ಕಡೆಯ ದಿನಾಂಕದ ಒಳಗಾಗಿ ಈ ಕಛೇರಿಗೆ ತಲುಪುವಂತೆ ಸಲ್ಲಿಸತಕ್ಕದ್ದು. ಅನಂತರ ಅಭ್ಯರ್ಥಿಗಳು / ಇಲಾಖೆಯವರ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
9. 08 ಪ್ರತಿಗಳಲ್ಲಿ ಅರ್ಜಿಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ತಪ್ಪಿದಲ್ಲಿ ಯಾವುದೇ ಕಾರಣವಿಲ್ಲದೆ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
10. ಜನ್ಮ ದಿನಾಂಕ ನಮೂದಾಗಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿ / ವರ್ಗಾವಣಾ ಪ್ರಮಾಣ ಪತ್ರ / ಕ್ಯುಮ್ಯುಲೇಟಿವ್ ದಾಖಲೆಯ ದೃಢೀಕೃತ ಪ್ರತಿಗಳನ್ನು ಲಗತ್ತಿಸತಕ್ಕದ್ದು.
11. ಸರ್ಕಾರದ ಆದೇಶ ಸಂ.: ಸಿ.ಆ.ಸು.ಇ./08/ಸಹಿಮ/95, ಬೆಂಗಳೂರು ದಿನಾಂಕ: 20-06-1995 ರನ್ವಯ ಎಸ್.ಸಿ. / ಎಸ್.ಟಿ. / ಪ್ರವರ್ಗ 01 ರ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ನಿಗದಿತ ನಮೂನೆಯಲ್ಲಿರುವ ಘೋಷಣಾ ಪತ್ರಗಳ ದೃಢೀಕೃತ ಪ್ರತಿಗಳನ್ನು ಸಲ್ಲಿಸತಕ್ಕದ್ದು ಮತ್ತು ಸಂಬಂಧಿಸಿದ ಪ್ರಾಧಿಕಾರಗಳಿಂದ ಪಡೆದ ಸ್ಕೂಲ್ ಲೀವಿಂಗ್ ಪ್ರಮಾಣಪತ್ರಗಳನ್ನು ಸಲ್ಲಿಸತಕ್ಕದ್ದು. ಅಭ್ಯರ್ಥಿಯು ತಾನು ಸಾಮಾನ್ಯವಾಗಿ ವಾಸಿಸುವ ಸ್ಥಳದ ವ್ಯಾಪ್ತಿಗೆ ಬರುವ ತಹಶೀಲ್ದಾರ್ / ಸಹಾಯಕ ವಿಭಾಗಾಧಿಕಾರಿಯಿಂದ ಪಡೆದ ಜಾತಿ ಪ್ರಮಾಣಪತ್ರವನ್ನು ಮಾತ್ರ ಸಲ್ಲಿಸತಕ್ಕದ್ದು. ಯಾವುದೇ ಮಾಹಿತಿಯು ಯಾವುದೇ ಹಂತದಲ್ಲಿ ತಪ್ಪೆಂದು ಅಥವಾ ಮರೆಮಾಚಲಾಗಿದೆ ಎಂದು ಕಂಡುಬಂದಲ್ಲಿ ಅಂತಹ ಅಭ್ಯರ್ಥಿಗಳ ವಿರುದ್ಧ ಸರ್ಕಾರ ಮತ್ತು ವಿ.ವಿ. ಯ ನಿಯಮಗಳ ಅನುಸಾರ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು.
12. ಈ ನೇಮಕಾತಿ ಪ್ರಕಟಣೆಯ ಯಾವುದೇ ಷರತ್ತುಗಳನ್ನು / ಮೀಸಲಾತಿ ವಿವರಗಳನ್ನು ಪ್ರಕಟಣೆಯ ದಿನಾಂಕದ ನಂತರವೂ ತಪ್ಪೆಂದು ಕಂಡುಬಂದಲ್ಲಿ ಸರಿಪಡಿಸುವ ಅಧಿಕಾರವನ್ನು ವಿಶ್ವವಿದ್ಯಾಲಯವು ಕಾಯ್ದುಕೊಂಡಿರುತ್ತದೆ.
13. ಅಭ್ಯರ್ಥಿಗಳ ವಯೋಮಿತಿ ಈ ಕೆಳಕಂಡಂತಿರುತ್ತದೆ.

| ಸಾಮಾನ್ಯ ಅಭ್ಯರ್ಥಿಗಳು | ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು | ಎಸ್.ಸಿ./ಎಸ್.ಟಿ./ಪ್ರವರ್ಗ-1 ಅಭ್ಯರ್ಥಿಗಳು |
|---|---|---|
| 18 – 35 ವರ್ಷಗಳು | 18 – 38 ವರ್ಷಗಳು | 18 – 40 ವರ್ಷಗಳು |

14. ಪ್ರತಿಯೊಂದು ಹುದ್ದೆಗೂ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸತಕ್ಕದ್ದು.
15. ಲಿಖಿತ ಪರೀಕ್ಷೆ / ಸಂದರ್ಶನ / ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಯಾವುದೇ ಪ್ರಯಾಣ ಭತ್ಯೆ / ದಿನಭತ್ಯೆಗಳನ್ನು ಪಾವತಿಸಲಾಗುವುದಿಲ್ಲ.
16. ಆಯ್ಕೆಯಾದ ಅಭ್ಯರ್ಥಿಗಳು ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ಯಾವುದೇ ಕಛೇರಿ / ಘಟಕ / ಸ್ನಾತಕೋತ್ತರ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸಲು ಸಿದ್ಧವಿರತಕ್ಕದ್ದು.
17. ಆಯ್ಕೆಯಾದ ಅಭ್ಯರ್ಥಿಗಳು 2 ವರ್ಷಗಳ ಕಾಲ ಖಾಯಂ ಪೂರ್ವ ಅವಧಿಯಲ್ಲಿರುತ್ತಾರೆ ಮತ್ತು ವಿಶ್ವವಿದ್ಯಾಲಯವು ಈ ಅವಧಿಯನ್ನು ನಿಯಮಾನುಸಾರ ವಿಸ್ತರಿಸಬಹುದಾಗಿದೆ.
18. ವಿಶ್ವವಿದ್ಯಾಲಯವು ಈ ನೇಮಕಾತಿ ಪ್ರಕಟಣೆಯಲ್ಲಿ ಜಾಹೀರಾತುಗೊಳಿಸಿದ ಹುದ್ದೆಗಳನ್ನು ಭರ್ತಿ ಮಾಡುವ ಅಥವಾ ಭರ್ತಿ ಮಾಡದಿರುವ ಪೂರ್ಣ ಅಧಿಕಾರವನ್ನು ಹೊಂದಿದೆ. ಈ ಸಂಬಂಧ ಯಾವುದೇ ಪತ್ರ ವ್ಯವಹಾರಗಳಿಗೆ ಅವಕಾಶವಿಲ್ಲ.

19. ಆಯ್ಕೆಯಾದ ಪ್ರತಿಯೊಬ್ಬ ಅಭ್ಯರ್ಥಿಯು ನಿಗದಿತ ನಮೂನೆಯಲ್ಲಿ ವಿಶ್ವವಿದ್ಯಾಲಯದೊಂದಿಗೆ ಸೇವಾ ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು.
20. ಒಮ್ಮೆ ಪಾವತಿಸಲಾದ ಶುಲ್ಕವನ್ನು ಯಾವುದೇ ಸಂದರ್ಭದಲ್ಲೂ ಹಿಂತಿರುಗಿಸಲಾಗುವುದಿಲ್ಲ.
21. ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಶಿಫಾರಸ್ಸು ಮಾಡುವುದು ಅನರ್ಹತೆಯಾಗುತ್ತದೆ.
22. **ವಿಶ್ವವಿದ್ಯಾಲಯವು ನೇಮಕಾತಿಗೆ ಸಂಬಂಧಿಸಿದ ಲಿಖಿತ ಪರೀಕ್ಷಾ ದಿನಾಂಕ, ತಾತ್ಕಾಲಿಕ ಅಂಕ ತಃಖ್ತೆ, ಮೆರಿಟ್ ಪಟ್ಟಿ ವಿಶ್ವವಿದ್ಯಾಲಯದ ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು ಹಾಗೂ ಅಭ್ಯರ್ಥಿಗಳು ಅರ್ಜಿಯಲ್ಲಿ ನೀಡಿರುವ ಸಂಚಾರಿ ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ಐ.ಡಿ.ಗೆ ಮಾಹಿತಿಗಳನ್ನು ಕಳುಹಿಸಲಾಗುವುದು ಆದ್ದರಿಂದ ಅಭ್ಯರ್ಥಿಗಳು ತಪ್ಪದೇ ವಿಶ್ವವಿದ್ಯಾಲಯದ ಅಂತರ್ಜಾಲ ಮತ್ತು ತಮ್ಮ ಇ-ಮೇಲ್ ಐ.ಡಿ.ಯನ್ನು ವೀಕ್ಷಿಸಲು ಸೂಚಿಸಿದೆ.**
23. ನಿಗದಿತ ದಿನಾಂಕದ ನಂತರ ಸಲ್ಲಿಸಲಾಗುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಅಂಚೆ ಅಥವಾ ಇತರೆ ವಿಳಂಬಗಳಿಗೆ ವಿಶ್ವವಿದ್ಯಾಲಯವು ಜವಾಬ್ದಾರಿಯಲ್ಲ.
24. ಎಲ್ಲಾ ಹುದ್ದೆಗಳ ನೇಮಕಾತಿಯು ಕರ್ನಾಟಕ ರಾಜ್ಯ ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಮೀಸಲಾತಿ / ಅರ್ಹತಾ ಷರತ್ತುಗಳು / ಆಯ್ಕೆ ಪ್ರಕ್ರಿಯೆ ಆದೇಶಗಳಿಗೆ ಒಳಪಟ್ಟಿರುತ್ತದೆ.
25. ಹುದ್ದೆಗಳ ಸಂಖ್ಯೆಯು ಅವಶ್ಯಕತೆ / ರಿಕ್ತ ಹುದ್ದೆಗಳ ಸಂಖ್ಯೆಯ ಆಧಾರದ ಮೇಲೆ ಬದಲಾವಣೆಗೆ ಒಳಪಟ್ಟಿರುತ್ತದೆ.
26. ಎಲ್ಲಾ ನೇಮಕಾತಿಗಳನ್ನು ಕರ್ನಾಟಕ ರಾಜ್ಯ ಸರ್ಕಾರದ ಆದೇಶಗಳು / ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000 ಮತ್ತು ಅದರಡಿ ರಚಿಸಲಾದ ಪರಿನಿಯಮಗಳನ್ವಯ ಮಾಡಲಾಗುವುದು.

ಆದೇಶದ ಮೇರೆಗೆ

5/2/18

ಕುಲಸಚಿವ

ಕುಲಸಚಿವ
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ-577 451

5/2/18

5/2/18